**CCE PF**
**CCE PR**

ಸಂಕೇತ ಸಂಖ್ಯೆ : **85-K** ವಿಷಯ : ಸಮಾಜ ವಿಜ್ಞಾನ

**Code No. : 85-K** **Subject : SOCIAL SCIENCE**

**(ಕನ್ನಡ ಭಾಷಾಂತರ / Kannada Version)**

**(ಹೊಸ ಪಠ್ಯಕ್ರಮ / New Syllabus)**

**(ಖಾಸಗಿ ಅಭ್ಯರ್ಥಿ + ಪುನರಾವರ್ತಿತ ಖಾಸಗಿ ಅಭ್ಯರ್ಥಿ / Private Fresh + Private Repeater)**

***ಸಾಮಾನ್ಯ ಸೂಚನೆಗಳು :***

i) ಈ ಪ್ರಶ್ನೋತ್ತರ ಕಿರುಪುಸ್ತಕವು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 57 ಪ್ರಶ್ನೆಗಳನ್ನು ಹೊಂದಿದೆ.

ii) ಪ್ರತಿಯೊಂದು ವಸ್ತುನಿಷ್ಠ ಮಾದರಿ ಪ್ರಶ್ನೆಯ ಉತ್ತರಕ್ಕಾಗಿ ಜಾಗವನ್ನು ನೀಡಲಾಗಿದೆ. ಸರಿಯಾದ ಉತ್ತರವನ್ನು ಆರಿಸಿ, ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.

iii) ವಿಷಯನಿಷ್ಠ ಮಾದರಿ ಪ್ರಶ್ನೆಗಳ ಉತ್ತರಗಳಿಗೆ ಸಾಕಷ್ಟು ಜಾಗವನ್ನು ನೀಡಲಾಗಿದೆ. ಉತ್ತರಗಳನ್ನು ಆಯಾ ಜಾಗಗಳಲ್ಲಿಯೇ ಬರೆಯಿರಿ.

iv) ವಸ್ತುನಿಷ್ಠ ಮಾದರಿ ಮತ್ತು ವಿಷಯನಿಷ್ಠ ಮಾದರಿ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಅನುಸರಿಸಿ.

v) ವಿದ್ಯಾರ್ಥಿಗಳು ಸೀಸದ ಕಡ್ಡಿ (ಪೆನ್ಸಿಲ್) ಯಿಂದ ಉತ್ತರಗಳನ್ನು ಬರೆಯಬಾರದು. ಪೆನ್ಸಿಲ್‌ನಿಂದ ಉತ್ತರ ಬರೆದಲ್ಲಿ ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದಿಲ್ಲ. (ನಕ್ಷೆಗಳು, ರೇಖಾಚಿತ್ರಗಳು ಮತ್ತು ಭೂಪಟಗಳನ್ನು ಬಿಟ್ಟು).

vi) ಬಹು–ಆಯ್ಕೆ, ಹೊಂದಿಸಿ ಬರೆಯುವ ಪ್ರಶ್ನೆಗಳ ವಿಷಯದಲ್ಲಿ ಕೆರೆದು ಅಳಿಸುವುದು / ತಿದ್ದಿ ಬರೆಯುವುದು / ಗುರುತಿಸುವುದು ಮಾಡಿದಲ್ಲಿ ಮೌಲ್ಯಮಾಪನಕ್ಕೆ ಅನರ್ಹವಾಗುತ್ತದೆ.

vii) ಪ್ರಶ್ನೆ ಪತ್ರಿಕೆಯನ್ನು ಓದಲು 15 ನಿಮಿಷಗಳ ಹೆಚ್ಚಿನ ಕಾಲಾವಕಾಶ ನೀಡಲಾಗಿದೆ.

viii) ನಿಮ್ಮ ಪ್ರಶ್ನೋತ್ತರ ಕಿರುಪುಸ್ತಕದ ಬಲಭಾಗದಲ್ಲಿರುವ ಗೆರೆಯ ಪಕ್ಕದ ಖಾಲಿ ಜಾಗದಲ್ಲಿ ಯಾವುದೇ ರೀತಿಯ ಬರಹಗಳನ್ನು ಬರೆಯಬಾರದು.



https://www.karnatakaboard.com/

I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕೆ ಕೊಟ್ಟಿರುವ ಜಾಗದಲ್ಲಿಯೇ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ : $10 \times 1 = 10$

1. 1935 ರ ಭಾರತ ಸರ್ಕಾರದ ಕಾಯ್ದೆಯು ಒಂದು ಮುಖ್ಯ ದಾಖಲೆಯಾಗಿದೆ. ಏಕೆಂದರೆ, ಅದು

   (A) ಪ್ರಾಂತ್ಯಗಳಲ್ಲಿ ದ್ವಿ–ದಳ ಸರ್ಕಾರವನ್ನು ಜಾರಿಗೆ ತಂದಿತು

   (B) ನಿಯಂತ್ರಣ ಮಂಡಳಿಯನ್ನು ನೇಮಿಸಿತು

   (C) ಮತೀಯ ಆಧಾರದ ಪ್ರತ್ಯೇಕ ಚುನಾವಣಾ ಕ್ಷೇತ್ರಗಳನ್ನು ಸ್ಥಾಪಿಸಿತು

   (D) ಅಖಿಲ ಭಾರತೀಯ ಸಂಯುಕ್ತ ವ್ಯವಸ್ಥೆಗೆ ಅವಕಾಶ ಮಾಡಿಕೊಟ್ಟಿತು

2. **A ಪಟ್ಟಿ**ಯಲ್ಲಿ ಸಮಾಜ ಸುಧಾರಕರು ಮತ್ತು **B ಪಟ್ಟಿ**ಯಲ್ಲಿ ಅವರ ಕೃತಿಗಳನ್ನು ಕೊಡಲಾಗಿದೆ. ಅವುಗಳಿಗೆ ಸರಿಹೊಂದುವ ಉತ್ತರದ ಗುಂಪನ್ನು ಗುರುತಿಸಿ :

| ***A ಪಟ್ಟಿ*** | ***B ಪಟ್ಟಿ*** |
|---|---|
| (a) ರಾಜಾ ರಾಮ್‌ಮೋಹನ್ ರಾಯ್ | (i) ಗುಲಾಮಗಿರಿ |
| (b) ಸ್ವಾಮಿ ದಯಾನಂದ ಸರಸ್ವತಿ | (ii) ಸಂವಾದ ಕೌಮುದಿ |
| (c) ಜ್ಯೋತಿಬಾ ಫುಲೆ | (iii) ನ್ಯೂ ಇಂಡಿಯಾ |
| (d) ಅನಿಬೆಸೆಂಟ್ | (iv) ಸತ್ಯಾರ್ಥ ಪ್ರಕಾಶ |

| | ***a*** | ***b*** | ***c*** | ***d*** |
|---|---|---|---|---|
| (A) | i | iii | ii | iv |
| (B) | ii | iv | i | iii |
| (C) | iii | ii | iv | i |
| (D) | iv | i | iii | ii |

3. ಗ್ರಾಮೀಣ ಮಹಿಳೆಯರ ವಿಕಾಸಕ್ಕಾಗಿ ಕರ್ನಾಟಕ ಸರ್ಕಾರ ಜಾರಿಗೆ ತಂದ ಕಾರ್ಯಕ್ರಮ

   (A) ಲೋಕಾಯುಕ್ತ (B) ಸ್ತ್ರೀಶಕ್ತಿ

   (C) ಸಾಕ್ಷರ ಭಾರತ (D) ಕುಟುಂಬ ಕಲ್ಯಾಣ ಕಾರ್ಯಕ್ರಮ

4. ವಿಶ್ವಸಂಸ್ಥೆಯ ಇತಿಹಾಸದಲ್ಲಿ 1948 ರ ಡಿಸೆಂಬರ್ 10, ಮಹತ್ವದ ದಿನವಾಗಿದೆ. ಏಕೆಂದರೆ, ಅಂದು

   (A) ಮಾನವ ಹಕ್ಕುಗಳ ಘೋಷಣೆಯಾಯಿತು

   (B) ವಿಶ್ವಸಂಸ್ಥೆ ಸ್ಥಾಪನೆಯಾಯಿತು

   (C) ನಿಶ್ಶಸ್ತ್ರೀಕರಣ ಸಾಧಿಸಲಾಯಿತು

   (D) ವರ್ಣಭೇದ ನೀತಿಯು ಕೊನೆಗೊಂಡಿತು



https://www.karnatakaboard.com/

5. ನಮ್ಮ ಸಂವಿಧಾನದ 24ನೇ ವಿಧಿಯು ಮಹತ್ವದ್ದಾಗಿದೆ. ಏಕೆಂದರೆ, ಇದನ್ನು ಅದು ನಿಷೇಧಿಸುತ್ತದೆ.

(A) ಮಕ್ಕಳ ದುಡಿಮೆ (B) ಅಸ್ಪೃಶ್ಯತೆ

(C) ವರದಕ್ಷಿಣೆ (D) ಭ್ರಷ್ಟಾಚಾರ

6. ಈ ನಕ್ಷೆಯಲ್ಲಿ ಗುರುತಿಸಿರುವ ನದಿ ಕಣಿವೆ ಯೋಜನೆಗಳನ್ನು ಸರಿಯಾಗಿ ಹೋಲಿಕೆಯಾಗುವುದು :




(A) 1 – ನಾಗಾರ್ಜುನ ಸಾಗರ, 2 – ಭಾಕ್ರಾ ನಂಗಲ್, 3 – ಕೋಸಿ

(B) 1 – ಭಾಕ್ರಾ ನಂಗಲ್, 2 – ಕೋಸಿ, 3 – ನಾಗಾರ್ಜುನ ಸಾಗರ

(C) 1 – ಕೋಸಿ, 2 – ನಾಗಾರ್ಜುನ ಸಾಗರ, 3 – ಭಾಕ್ರಾ ನಂಗಲ್

(D) 1 – ನಾಗಾರ್ಜುನ ಸಾಗರ, 2 – ಕೋಸಿ, 3 – ಭಾಕ್ರಾ ನಂಗಲ್

7. ಕಡಲ ಕೊರೆತವು ಅತಿ ಹೆಚ್ಚಾಗಿ ಕಂಡುಬರುವ ಕಡಲತೀರ ರಾಜ್ಯ

(A) ಕೇರಳ (B) ತಮಿಳುನಾಡು

(C) ಒಡಿಶಾ (D) ಪಶ್ಚಿಮ ಬಂಗಾಳ

8. ಭಾರತದ ಆರ್ಥಿಕ ಯೋಜನೆಯ ಪಿತಾಮಹ

(A) ಡಾ. ಎಂ.ಎಸ್. ಸ್ವಾಮಿನಾಥನ್

(B) ಡಾ. ನಾರ್ಮನ್ ಬೋರ್ಲಾಗ್

(C) ಸರ್ ಎಂ. ವಿಶ್ವೇಶ್ವರಯ್ಯ

(D) ರಾಜಾ ರಾಮ್‌ಮೋಹನ್ ರಾಯ್



https://www.karnatakaboard.com/

9. ಹಸಿರು ಕ್ರಾಂತಿಯು ಇದನ್ನು ಸೂಚಿಸುತ್ತದೆ

(A) ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಹೆಚ್ಚಳ

(B) ಮೀನುಗಳ ಉತ್ಪಾದನೆಯಲ್ಲಿ ಹೆಚ್ಚಳ

(C) ಹಾಲಿನ ಉತ್ಪಾದನೆಯಲ್ಲಿ ಹೆಚ್ಚಳ

(D) ಮಾಂಸದ ಉತ್ಪಾದನೆಯಲ್ಲಿ ಹೆಚ್ಚಳ

10. ವಿಪ್ರೋ ತಂತ್ರಜ್ಞಾನ ಸಂಸ್ಥೆಯ ಅಧ್ಯಕ್ಷರು

(A) ಏಕ್ತಾ ಕಪೂರ್

(B) ಧೀರು ಭಾಯಿ ಅಂಬಾನಿ

(C) ನರೇಶ್ ಗೋಯಲ್

(D) ಅಜೀಮ್ ಪ್ರೇಮ್‌ಜಿ

II. ಈ ಕೆಳಗಿನ ಪ್ರಶ್ನೆಗಳಿಗೆ ***ಒಂದೊಂದು*** ವಾಕ್ಯದಲ್ಲಿ ಉತ್ತರ ಬರೆಯಿರಿ : $14 \times 1 = 14$

11. ಭಾರತೀಯರು ಜನಪದ ಚರಿತ್ರೆಗೆ ಹೆಚ್ಚು ಪ್ರಾಶಸ್ತ್ಯ ನೀಡಿದ್ದರು. ಏಕೆ ?

12. ಸ್ವಾಮಿ ವಿವೇಕಾನಂದರು ರಾಮಕೃಷ್ಣ ಮಿಷನ್ ಅನ್ನು ಏಕೆ ಸ್ಥಾಪಿಸಿದರು ?

13. ರಷ್ಯಾದಲ್ಲಿ 1905 ರಲ್ಲಿ ಝಾರ್ ದೊರೆಗಳ ವಿರುದ್ಧ ವ್ಯಾಪಕವಾದ ಬಂಡಾಯ ಉಂಟಾಯಿತು. ಏಕೆ ?

14. ವರ್ಣಭೇದ ನೀತಿಯು ವಿಶ್ವಶಾಂತಿ ಹಾಗೂ ಸಹಬಾಳ್ವೆಗೆ ಹೇಗೆ ಮಾರಕವಾಗುತ್ತದೆ ?

15. ಆಫ್ರಿಕಾದಲ್ಲಿ ವರ್ಣಭೇದ ನೀತಿಯ ವಿರುದ್ಧ ಯಾರು ಹೋರಾಡಿದರು ?

16. ಸಮಾನ ವೇತನ ಕಾಯ್ದೆಯನ್ನು ಏಕೆ ಜಾರಿಗೆ ತರಲಾಯಿತು ?

17. 'ಬಾಲ ಕಾರ್ಮಿಕರ ಪುನರ್ವಸತಿ ಕಲ್ಯಾಣ ನಿಧಿ'ಯನ್ನು ಏಕೆ ಸ್ಥಾಪಿಸಲಾಯಿತು ?



https://www.karnatakaboard.com/

18. ಬೇಸಿಗೆ ಕಾಲದಲ್ಲಿ ಉತ್ತರ ಭಾರತದ ಉಷ್ಣಾಂಶ ಹೆಚ್ಚಾಗಿರಲು ಕಾರಣವೇನು ?

19. ಬೀಳು ಭೂಮಿಯನ್ನು ವ್ಯವಸಾಯಕ್ಕೆ ಹೇಗೆ ಬಳಸಬಹುದು ?

20. ಭಾರತದ ರೈತರು ಹೆಚ್ಚಾಗಿ ಜೂನ್ – ಜುಲೈನಲ್ಲಿ ಬಿತ್ತನೆ ಮಾಡಿ, ಅಕ್ಟೋಬರ್‌ನಲ್ಲಿ ಇಳುವರಿ ಪಡೆಯುತ್ತಾರೆ. ಏಕೆ ?

21. ಗಣಿಗಾರಿಕೆಯ ಪ್ರದೇಶದಲ್ಲಿ ಭೂಕುಸಿತವುಂಟಾಗಲು ಕಾರಣವೇನು ?

22. ಕೇಂದ್ರ ಸರ್ಕಾರದ ಆಯ–ವ್ಯಯವನ್ನು ಲೋಕಸಭೆಯಲ್ಲಿ ಯಾರು ಮಂಡಿಸುತ್ತಾರೆ ?

23. 'ಬ್ಯಾಂಕುಗಳ ಬ್ಯಾಂಕ್' ಎಂದು ಯಾವ ಬ್ಯಾಂಕನ್ನು ಕರೆಯಲಾಗುತ್ತದೆ ?

24. ಜಿಲ್ಲಾ ಕೈಗಾರಿಕಾ ಕೇಂದ್ರಗಳನ್ನು ಏಕೆ ಸ್ಥಾಪಿಸಲಾಯಿತು ?

III. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ **ಎರಡು** ವಾಕ್ಯಗಳಲ್ಲಿ ಉತ್ತರಿಸಿ : $25 \times 2 = 50$

25. 'ವೈಜ್ಞಾನಿಕ ಬೆಳವಣಿಗೆಯು ಸಮುದ್ರಯಾನಕ್ಕೆ ಕಾರಣ' ಈ ಹೇಳಿಕೆಯನ್ನು ಸಮರ್ಥಿಸಿ.

26. ಹೈದರಾಬಾದ್ ಕರ್ನಾಟಕದ ಪ್ರದೇಶಗಳಾವುವು ?

27. ಗೋವಾವನ್ನು ಪೂರ್ಚುಗೀಸರಿಂದ ಹೇಗೆ ವಿಮುಕ್ತಿಗೊಳಿಸಲಾಯಿತು ?

**ಅಥವಾ**

ನಿರಾಶ್ರಿತರ ಸಮಸ್ಯೆಯನ್ನು ದೇಶವು ಹೇಗೆ ಎದುರಿಸಿತು ?

28. 'ನಾಜಿ ಸಿದ್ಧಾಂತವು ಜರ್ಮನಿಯನ್ನು ಹಾಳುಗೆಡವಿತು' ಸಮರ್ಥಿಸಿ.

29. ಕೋಮುವಾದವು ದೇಶದ ಐಕ್ಯತೆಗೆ ಮಾರಕವಾಗಿದೆ. ಹೇಗೆ ?



https://www.karnatakaboard.com/

30. 'ಜಾಗತಿಕ ಮಟ್ಟದ ಆರ್ಥಿಕ ಸಮಸ್ಯೆಗಳ ಪರಿಹಾರದಲ್ಲಿ IMF ಪ್ರಮುಖ ಪಾತ್ರವನ್ನು ವಹಿಸುತ್ತದೆ.' ಈ ಹೇಳಿಕೆಯನ್ನು ಸಮರ್ಥಿಸಿ.

31. ಸ್ವ–ಸಹಾಯ ಗುಂಪುಗಳು ಎಂದರೇನು ?

32. ಭಾರತದ ಪರ್ಯಾಯ ಪ್ರಸ್ಥಭೂಮಿಯು ಆರ್ಥಿಕವಾಗಿ ಹೆಚ್ಚು ಪ್ರಾಮುಖ್ಯತೆಯನ್ನು ಪಡೆದಿದೆ. ಸ್ಪಷ್ಟೀಕರಿಸಿ.

33. ಮಣ್ಣಿನ ಸವೆತವನ್ನು ಹೇಗೆ ತಡೆಗಟ್ಟಬಹುದು ?

34. ನಿತ್ಯಹರಿದ್ವರ್ಣದ ಅರಣ್ಯಗಳು ಹಾಗೂ ಮರುಭೂಮಿ ಅರಣ್ಯಗಳ ನಡುವಿನ ವ್ಯತ್ಯಾಸ ತಿಳಿಸಿ.

35. ಸಾಂಪ್ರದಾಯಕ ಶಕ್ತಿಮೂಲಗಳ ಬಳಕೆಯನ್ನು ಮಿತಿಗೊಳಿಸುವುದು ಇಂದು ಅಗತ್ಯವಾಗಿದೆ. ಏಕೆ ?

36. ಸಂಪರ್ಕದ ಪ್ರಾಮುಖ್ಯತೆಯನ್ನು ತಿಳಿಸಿ.

37. ಗ್ರಾಮೀಣ ಭಾಗದ ಜನರ ನಗರ ವಲಸೆಯನ್ನು ತಡೆಗಟ್ಟುವ ಕ್ರಮಗಳನ್ನು ತಿಳಿಸಿ.

38. ತಲಾ ಆದಾಯವು ಅಭಿವೃದ್ಧಿಯ ನೈಜ ಮಾಪಕವಾಗಲಾರದು. ಏಕೆ ?

39. ಜಾಗತೀಕರಣವು ಪರಿಸರದ ಅವನತಿಗೆ ಕಾರಣವಾಗಿದೆ. ಹೇಗೆ ?

40. ಭಾರತದ ಕೆಲವು ಕ್ರಾಂತಿಕಾರಿ ನಾಯಕರನ್ನು ಹೆಸರಿಸಿ.

41. ಭಾರತವು ಸ್ವಾತಂತ್ರ್ಯಗಳಿಸಿದ ಸಮಯದಲ್ಲಿ ಎದುರಿಸಿದ ಸಮಸ್ಯೆಗಳು ಯಾವುವು ?

42. ಭಾರತದಿಂದ ಯುರೋಪ್‌ಗೆ ರಫ್ತಾಗುತ್ತಿದ್ದ ವಸ್ತುಗಳು ಯಾವುವು ?

43. ದ್ವಿತೀಯ ಮಹಾಯುದ್ಧದ ಬಳಿಕ ಎದುರಾದ ಮುಖ್ಯ ಸಮಸ್ಯೆಗಳು ಯಾವುವು ?

44. ಭಾರತ ಹಾಗೂ ಪಾಕಿಸ್ತಾನಗಳ ಮಧ್ಯೆ ಉದ್ವಿಗ್ನತೆಗೆ ಕಾರಣವನ್ನು ತಿಳಿಸಿ.



https://www.karnatakaboard.com/

45. ನಿರುದ್ಯೋಗದ ಪರಿಣಾಮಗಳು ಯಾವುವು ?

46. ಭಾರತದಲ್ಲಿ ದೊರಕುವ ಪ್ರಮುಖ ಖನಿಜ ಸಂಪನ್ಮೂಲಗಳಾವುವು ?

47. ಸಂಪರ್ಕದ ವಿಧಗಳಾವುವು ?

48. ಮನುಷ್ಯನ ಜೀವಿತಾವಧಿ ಹೆಚ್ಚಿಸಲು ಸಹಾಯಕವಾಗುವ ಅಂಶಗಳನ್ನು ತಿಳಿಸಿ.

49. ಬ್ಯಾಂಕುಗಳಲ್ಲಿ ತೆರೆಯಬಹುದಾದ ಯಾವುದಾದರೂ ಎರಡು ಖಾತೆಗಳ ಹೆಸರುಗಳನ್ನು ತಿಳಿಸಿ.

IV. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ **ಆರು** ವಾಕ್ಯಗಳಲ್ಲಿ ಉತ್ತರಿಸಿ : $6 \times 3 = 18$

50. 1857 ರ ದಂಗೆಯ ರಾಜಕೀಯ ಹಾಗೂ ಆರ್ಥಿಕ ಕಾರಣಗಳನ್ನು ವಿವರಿಸಿ.

**ಅಥವಾ**

ಬ್ರಿಟಿಷರು ಶಿಕ್ಷಣ ಕ್ಷೇತ್ರದಲ್ಲಿ ಕೈಗೊಂಡ ಸುಧಾರಣೆಗಳನ್ನು ತಿಳಿಸಿ.

51. ಭಾರತದ ವಿದೇಶಾಂಗ ನೀತಿಯು ರೂಪುಗೊಳ್ಳಲು ಪ್ರಭಾವಬೀರಿದ ಅಂಶಗಳನ್ನು ತಿಳಿಸಿ.

**ಅಥವಾ**

ರಷ್ಯಾದೊಂದಿಗೆ ಭಾರತದ ಸಂಬಂಧವನ್ನು ವಿವರಿಸಿ.

52. ಅಸ್ಪೃಶ್ಯತಾ ನಿವಾರಣೆಗೆ ತೆಗೆದುಕೊಂಡಿರುವ ಸಂವಿಧಾನಾತ್ಮಕ ಮತ್ತು ಶಾಸನಾತ್ಮಕ ಕ್ರಮಗಳಾವುವು ? ವಿವರಿಸಿ.

**ಅಥವಾ**

ನಿರುದ್ಯೋಗ ಸಮಸ್ಯೆಗೆ ಪರಿಹಾರ ಕ್ರಮಗಳನ್ನು ತಿಳಿಸಿ.

53. ಭಾರತದ ಪ್ರಮುಖ ಬಂದರುಗಳು ಯಾವುವು ?

**ಅಥವಾ**

ಕೈಗಾರಿಕೆಗಳ ಸ್ಥಾನೀಕರಣದ ಮೇಲೆ ಪ್ರಭಾವ ಬೀರುವ ಅಂಶಗಳು ಯಾವುವು ?

54. ಗ್ರಾಮೀಣ ಅಭಿವೃದ್ಧಿಯ ಮಹತ್ವವನ್ನು ಸಂಕ್ಷಿಪ್ತವಾಗಿ ವಿವರಿಸಿ.

**ಅಥವಾ**

ಕೇಂದ್ರ ಸರ್ಕಾರದ ತೆರಿಗೆಯೇತರ ಆದಾಯದ ಮೂಲಗಳನ್ನು ತಿಳಿಸಿ.



https://www.karnatakaboard.com/

55. ಬ್ಯಾಂಕು ಖಾತೆ ತೆರೆಯುವುದರಿಂದಾಗುವ ಅನುಕೂಲಗಳನ್ನು ತಿಳಿಸಿ.

***ಅಥವಾ***

ಜೀವ ವಿಮೆಯ ಪ್ರಾಮುಖ್ಯತೆಯನ್ನು ವಿವರಿಸಿ.

V. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ***ಎಂಟು*** ವಾಕ್ಯಗಳಲ್ಲಿ ಉತ್ತರಿಸಿ : $1 \times 4 = 4$

56. ಡಾ. ಬಿ.ಆರ್. ಅಂಬೇಡ್ಕರ್‌ರವರ ಕೊಡುಗೆಗಳನ್ನು ವಿವರಿಸಿ.

VI. 57. ಭಾರತದ ನಕ್ಷೆಯನ್ನು ಬರೆದು, ಅದರಲ್ಲಿ ಈ ಕೆಳಗಿನವುಗಳನ್ನು ಗುರುತಿಸಿ : $1 + 3 = 4$

a) $82\frac{1}{2}^{o}$ ಪೂರ್ವ ರೇಖಾಂಶ

b) ನರ್ಮದಾ ನದಿ

c) ಕೋರಮಂಡಲ ತೀರ

***ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ಪರ್ಯಾಯ ಪ್ರಶ್ನೆ : (ಪ್ರಶ್ನೆ ಸಂಖ್ಯೆ 57 ರ ಬದಲಿಗೆ)***

ಭಾರತೀಯರ ಜನಜೀವನಕ್ಕೆ ಹಿಮಾಲಯದಿಂದಾಗುವ ಅನುಕೂಲಗಳೇನು ? 4



https://www.karnatakaboard.com/